ವಿಶ್ವವಾಣಿ

f



# ಜೈನ್ ಕಾಲೇಜಿನಲ್ಲಿ ರಕ್ತದಾನ ಶಿಬಿರ

**ಬೆಂಗಳೂರು:** ಯುವ ಪೀಳಿಗೆಗೆ ರಕ್ತ ದಾನದ ಮಹತ್ವ ತಿಳಿಸಲು ಜೈನ್ ಕಾಲೇಜು ವತಿಯಿಂದ ರಕ್ತದಾನ ಶಿಬಿರವನ್ನು ಮಂಗಳವಾರ ಆಯೋಜಿಸಲಾಗಿತ್ತು.

ಕಿದ್ವಾಯಿ ಆಸ್ಪತ್ರೆಯ ಡಾ.ಕೆ. ಪ್ರತಿಭಾ ಮಾತನಾಡಿ, ವಿದ್ಯಾರ್ಥಿಗಳು ಸ್ವ ಇಚ್ಛೆಯಿಂದ ರಕ್ತದಾನ ಮಾಡಲು ಮುಂದೆ ಬರಬೇಕು. ಇದರಿಂದ ರಕ್ತ ಬ್ಯಾಂಕ್‌ಗಳಲ್ಲಿನ ರಕ್ತದ ಕೊರತೆ ನೀಗುತ್ತದೆ. ಜೈನ್ ವಿವಿಯ ಕಾರ್ಯ ಶ್ಲಾಘನೀಯ ಎಂದರು.

ಜೈನ ವಿವಿಯ ಎನ್‌ಸಿಸಿ ವಿಭಾಗದ ಮುಖ್ಯಸ್ಥ ರಣ್‌ವೀರ್ ಸಿಂಗ್ ಮಾತನಾಡಿ, ರಕ್ತದಾನ ಶಿಬಿರ ಆಯೋಜಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ರಕ್ತದಾನದ ಜಾಗೃತಿ ಮೂಡಿಸುವ ಕಾರ್ಯವನ್ನು ಸಂಸ್ಥೆ ಪ್ರತಿ ವರ್ಷ ಮಾಡುತ್ತಿದೆ ಎಂದರು.